**ದಿನಾಂಕಃ 14.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎನ್ ಪಿ., ಪ್ರತಿವಾದಿ ಪರ ವಕೀಲರಿಂದ**

**2.** ಕ್ರಯದ ಕರಾರು ಪತ್ರವನ್ನು 07.02.2020 ನೇ ಇಸವಿಯಲ್ಲಿ ಮಾಡಿಕೊಟ್ಟಿರುತ್ತಾರೆ. ಅದಕ್ಕಿಂತ 3 ತಿಂಗಳ ಮೊದಲು ಪ್ರತಿವಾದಿಯವರು ಜಮೀನನ್ನು ಮಾರಾಟ ಮಾಡುತ್ತೇನೆಂದು ತಿಳಿಸಿರುತ್ತಾರೆ. ಮಾತುಕತೆಯೂ ಪ್ರತಿವಾದಿಯವರ ಮನೆಯಲ್ಲಿ ಜರುಗಿರುತ್ತದೆ. ಕ್ರಯದ ಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಗೊತ್ತಿರುತ್ತದೆ. ಇ– ಸ್ವತ್ತನ್ನು ಮಾಡಿಸಿಕೊಟ್ಟ ನಂತರ ಕ್ರಯ ಪತ್ರ ಬರೆದುಕೊಡಬೇಕಾಗಿ ಮಾತುಕತೆಯಾಗಿತ್ತು. ಕ್ರಯ ಪತ್ರವನ್ನು 3 ತಿಂಗಳ ಅವಧಿಯಲ್ಲಿ ಬರೆದುಕೊಡಬೇಕಾಗಿ ಒಕ್ಕಣಿಕೆ ಇರುತ್ತದೆ ಎಂದರೆ ಸಾಕ್ಷಿಯೂ ಮೂಲ ಕ್ರಯದ ಕರಾರು ಪತ್ರವನ್ನು ನೋಡಿ ಹೌದು ಎಂದು ನುಡಿಯುತ್ತಾರೆ.

**3.** ಕ್ರಯದ ಕರಾರು ಪತ್ರವನ್ನು ದಿ. 07.02.2020 ರಂದು ನೊಂದಣಿ ಮಾಡಿಸಲಾಗಿರುತ್ತದೆ. ಆ ದಿನ 1 ಲಕ್ಷ ನಗದು ಕೊಟ್ಟು ಒಂದು ಚೆಕ್ ನ್ನು ಕೊಟ್ಟಿರುತ್ತಾರೆ. ಚೆಕ್ ನಲ್ಲಿ ಯಾವ ದಿನಾಂಕವನ್ನು ನಮೂದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಿದ ನಂತರ ಚೆಕ್ ನ್ನು ಕೊಡಲಾಗಿರುತ್ತದೆ.

**4.** ಪ್ರತಿವಾದಿಯವರು ಮೃತ ಆಂಜನೇಯಪ್ಪ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದನ್ನು ಮೃತ ಆಂಜನೇಯಪ್ಪ ಸೃಷ್ಟಿಮಾಡಿಕೊಂಡಿದ್ದು, ಅವರ ವಾರಸ್ಸುದಾರರ ಕೋರಿಕೆ ಮೇರೆಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 3 ತಿಂಗಳ ನಂತರ ಕ್ರಯ ಪತ್ರವನ್ನು ಮಾಡಿಕೊಡಿ ಎಂದು ಮೃತ ಆಂಜನೇಯಪ್ಪ ಪ್ರತಿವಾದಿಯವರನ್ನು ವಿಚಾರಿಸಿರುತ್ತಾರೆ.

**5.** ಮೃತ ಆಂಜನೇಯಪ್ಪ ದಿ. 16.02.2023 ರಂದು ತೀರಿಕೊಂಡಿರುತ್ತಾರೆ ಎಂದರೆ ಇರಬಹುದು. ಅವರು ತೀರಿಕೊಳ್ಳುವ ತಾರೀಖಿಗೆ 3 ವರ್ಷ ಮುಗಿದಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಕಾನೂನು ಬದ್ಧ ನೋಟಿಸನ್ನು ಯಾವಾಗ ಕೊಡಲಾಗಿದೆ ಎಂದು ಹೇಳಲು ಬರುವುದಿಲ್ಲ. ಕ್ರಯದ ಕರಾರು ಪತ್ರ ಆದ ನಂತರ ಸುಮಾರು 3 ವರ್ಷ 9 ತಿಂಗಳ ನಂತರ ಕಾನೂನು ಬದ್ಧ ನೋಟಿಸನ್ನು ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೃತ ಆಂಜನೇಯಪ್ಪನೇ ಕ್ರಯ ಪತ್ರ ಬರೆಸಿಕೊಳ್ಳಲು ಮುಂದೆ ಬಂದಿಲ್ಲ ಎಂದರೆ ಸರಿಯಲ್ಲ. ವಾದಿಯವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.